ಕರ್ನಾಟಕ ವಿಧಾನಸಭೆ

ಶುಕ್ರವಾರ 18ನೇ ಜುಲೈ 2008 ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 10-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಜಗದೀಶ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

(ಸಭೆಯು 10-48ಕ್ಕೆ ಸಮಾವೇಶಗೊಂಡಿತು.)

ಅಧ್ಯಕ್ಷರು : 2008-09 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಬಹುದು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ : ಬಜೆಟ್ ಮೇಲಿನ ಚರ್ಚೆಯನ್ನು ಲೈವ್ ಟೆಲಿಕಾಸ್ಟ್ ಮಾಡುವ ಬಗ್ಗೆ.

ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕಿಂತ ಮೊದಲು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಪ್ರಸೆಂಟ್ ಮಾಡುವಾಗ ಇಡೀ ರಾಜ್ಯದಲ್ಲಿ, ದೇಶದಲ್ಲಿ ಅವರ ಸಂದೇಶವನ್ನು ಮುಟ್ಟಿಸಬೇಕು ಮತ್ತು ಬಜೆಟ್‌ನಲ್ಲಿ ಮಾಡಿದಂಥ ಭಾಷಣ ಮತ್ತು ಅವರ ವಾಗ್ದಾನವನ್ನು ಜನರಿಗೆ ತಲುಪಿಸಬೇಕೆಂದು ನಿನ್ನೆ ಲೈವ್ ಟೆಲಿಕಾಸ್ಟ್ ಮಾಡಿದರು.

ಸದನದ ಕಲಾಪ ಪ್ರಸಾರ ಮಾಡಲು ಅನುಮತಿ ನೀಡುವ ಅಧಿಕಾರ ತಮಗಿದೆ. ಆದರೆ ಇವತ್ತು ಬಜೆಟ್ ಮೇಲೆ ಚರ್ಚೆ ನಡೆದಿರುವ ಸಂದರ್ಭದಲ್ಲಿ ಆ ಸವಲತ್ತನ್ನು ಬೇರೆ ಸದಸ್ಯರಿಗೆ ಏಕೆ ಕೊಡಲಿಲ್ಲ? ನಾವು ಇಲ್ಲಿ ಮಾತನಾಡುವುದು ಜನರಿಗೆ ತಲುಪಬೇಡವೇ? ಅವರು ಹೇಳಿದ್ದರ ಬಗ್ಗೆ ನಾವು ಇವತ್ತು ಉತ್ತರವನ್ನು ಕೊಡತಕ್ಕ ಅಥವಾ ಬೇರೆ ಜನರಿಗೆ ನಮ್ಮ ಅಭಿಪ್ರಾಯಗಳನ್ನು ತಿಳಿಸತಕ್ಕ ಹಕ್ಕು ನಮಗೆ ಇದೆಯೋ, ಇಲ್ಲವೋ? ಇದ್ದರೆ, ಆ ಹಕ್ಕು ಸಮಾನವಾಗಿ ಇಬ್ಬರಿಗೂ ಇರಬೇಕು. ಈ ಸದನದಲ್ಲಿ ಎಲ್ಲರೂ ಸಮಾನರು. ಮಾನ್ಯ ಮುಖ್ಯಮಂತ್ರಿಗಳಾಗಿ ಅವರಿಗೆ ಕೆಲವೊಂದು ವಿಶೇಷವಾದಂತಹ Privileges ಇವೆ. ಆದರೆ ಈ ಸದನದಲ್ಲಿ ಮಾತನಾಡುವಾಗ ಇಲ್ಲಿ ಕುಳಿತಿರುವ ನಾವೆಲ್ಲರೂ ಸದಸ್ಯರೇ ಆಗಿದ್ದೇವೆ. ಆ ಸದಸ್ಯರಿಗೆ ಯಾವ ವಿಷಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರೋ, ಅದೇ ವಿಷಯಗಳನ್ನು ಜನರ ಮುಂದಿಡುವುದಕ್ಕೆ ನಮಗೂ ಕೂಡ ಅವಕಾಶ ಮಾಡಿಕೊಡಬೇಕು. ನಿನ್ನೆ ಇದ್ದ ವಾತಾವರಣ ಇವತ್ತು ಕಾಣುತ್ತಿಲ್ಲ. ಇದಕ್ಕೇನು ಕಾರಣ? ತಾವು ಮೊದಲು ಅದನ್ನು ಬಗೆಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, Leader of opposition ಎಂದರೆ shadow Chief Minister ಇದ್ದಹಾಗೆ. ನಿನ್ನೆ Chief Minister ಮಾತನಾಡುವಾಗ ತಾವು ಎಷ್ಟೆಲ್ಲಾ facilities ಮಾಡಿಕೊಟ್ಟಿದ್ದೀರಿ, ಆದರೆ ಇವತ್ತು Leader of Opposition ಮಾತನಾಡುವಾಗ ಅಂತಹ ಯಾವ facilities ಇಲ್ಲವೆಂದರೆ ಸರಿಯಲ್ಲ. ದಯಮಾಡಿ ತಾವು ಅದರ ಬಗ್ಗೆ ಗಮನಹರಿಸಬೇಕು.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನೊಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೋ, ಅದಕ್ಕೆ ನನ್ನ ಸಹಮತ ಇದೆ. ಅದರ ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲ. ಇಲ್ಲಿ ನಡೆಯುತ್ತಿರತಕ್ಕ ಕಾರ್ಯಕಲಾಪ ಏನಿದೆ, ಅದು ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣ ಇರಬಹುದು ಅಥವಾ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಂತಾದ್ದು ಇರಬಹುದು ಅಥವಾ ಕೇವಲ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ವಿರೋಧ ಪಕ್ಷದ ನಾಯಕರು ಅಷ್ಟೇ ಅಲ್ಲ, ಇಡೀ ಸದನದ ಸದಸ್ಯರು ಯಾವುದೇ ಒಂದು ಚರ್ಚೆಯಲ್ಲಿ ಭಾಗವಹಿಸಿದಂತಹ ಸಂದರ್ಭದಲ್ಲಿ ಅದು ಸಾರ್ವಜನಿಕರಿಗೆ ಪಾರದರ್ಶಕವಾದ ರೀತಿಯಲ್ಲಿ ಸಿಗಬೇಕೆಂಬ ಅಭಿಪ್ರಾಯ ಇರತಕ್ಕ ವ್ಯಕ್ತಿ ನಾನಾಗಿದ್ದೇನೆ. ನಾನು ಹಿಂದೆ ಹಲವಾರು ವರ್ಷಗಳಿಂದ ನೋಡಿಕೊಂಡು ಬಂದಿದ್ದೇನೆ. ಬಜೆಟ್ ಭಾಷಣ ಇದ್ದಂತಹ ಸಂದರ್ಭದಲ್ಲಿ ಇರಬಹುದು ಅಥವಾ ಮಾನ್ಯ ಪಾಜ್ಯಪಾಲರ ಭಾಷಣ ಇದ್ದಂತಹ ಸದಂರ್ಭದಲ್ಲಿ ಇರಬಹುದು, ಆಗ ಕೆಲವೊಂದು ಟಿವಿ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮಗಳು ತಾವೇ ಮುಂದೆ ಬಂದು ಅದನ್ನು ನೇರ ಪ್ರಸಾರ ಮಾಡುತ್ತೇವೆಂದು ಅರ್ಜಿಯೊಂದನ್ನು ಕೊಡುತ್ತಾರೆ. ಅಂತಹ ಅರ್ಜಿಯನ್ನು ನಾವು Consider ಮಾಡಿ ಪ್ರಸಾರ ಮಾಡಲು ಅವರಿಗೆ ಅವಕಾಶವನ್ನು ಮಾಡಿಕೊಟ್ಟಿರುತ್ತೇವೆ. ದೂರದರ್ಶನದವರಿಗೆ ಪ್ರಸಾರ ಮಾಡಲು ನಾವೇ ಅವಕಾಶ ಕೊಡುತ್ತೇವೆ. ಈಗ ಇರುವಂತಹ ವ್ಯವಸ್ಥೆ ಆ ರೀತಿ ಇದೆ. ಮುಂಬರುವ ದಿವಸಗಳಲ್ಲಿ ತಮ್ಮ ಅಭಿಪ್ರಾಯದಂತೆ, ಇಡೀ ಸದನದ ಕಾರ್ಯಕಲಾಪವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಪಾರದರ್ಶಕವಾಗಿ ಎಲ್ಲರಿಗೂ ತಲುಪಿಸಲು ಏನು ವ್ಯವಸ್ಥೆ ಮಾಡಬೇಕೋ, ಅದಕ್ಕೆ ಪೂರಕವಾಗಿ ನಾನು ಕೆಲಸ ಮಾಡುತ್ತೇನೆ. ನಾನು ಎಲ್ಲಿಯವರೆಗೆ ಚಿಂತನೆ ಮಾಡುತ್ತಿದ್ದೇನೆ ಎಂದರೆ, ಲೋಕಸಭೆಯಲ್ಲಿ ಯಾವ ರೀತಿ ಇಡೀ ದಿನದ proceedings ಅನ್ನು entire business, ಅದು Question Hour ಇರಬಹುದು, Zero Hour ಇರಬಹುದು, ಇನ್ನಿತರೆ ಹಲವಾರು ವಿಷಯಗಳ ಬಗ್ಗೆ ನಡೆಯುವ ಚರ್ಚೆ ಇರಬಹುದು, ಲೋಕಸಭೆಯದೇ ಆದ ಪ್ರತ್ಯೇಕ ಟಿ.ವಿ. ಚಾನೆಲ್ ಮಾಡಿ ಅದರ ಮುಖಾಂತರ ನೇರವಾಗಿ ಪ್ರಸಾರವನ್ನು ಏನು ಮಾಡುತ್ತಾರೋ, ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ವಿಧಾನ ಸಭೆಯ ಅಧಿವೇಶನ ಸಹ ನೇರವಾಗಿ ಪ್ರಸಾರ ಮಾಡಲು ಸ್ವತಂತ್ರ ಚಾನೆಲ್‌ವೊಂದನ್ನು ಮಾಡಬೇಕೆನ್ನುವ ಬಗ್ಗೆ ನಾನು think ಮಾಡುತ್ತಿದ್ದೇನೆ. ನಿಮ್ಮ ಸಲಹೆ ಉತ್ತಮವಾದ ಸಲಹೆಯಾಗಿದೆ. ಅದಕ್ಕೆ ಪೂರಕವಾಗಿ ನಾನು ಕೆಲಸ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸ್ವತಂತ್ರವಾದ ಚಾನೆಲ್ ಏನೂ ನಮಗೆ ಬೇಕಾಗಿಲ್ಲ. ವಿಶೇಷವಾಗಿ throughout the country,ಎಲ್ಲಾ ಮೀಡಿಯಾಗಳೂ ಒಂದು version ಮಾತ್ರ ತೋರಿಸುತ್ತವೆ, ಇನ್ನೊಂದು version ತೋರಿಸುತ್ತಿಲ್ಲ. ನಾವು ಏನು ಹೇಳುತ್ತೇವೆ ಎನ್ನುವುದನ್ನೂ ಕೂಡ ಜನರಿಗೆ ತಲುಪಿಸಬೇಕಲ್ಲವೇ? ಆ ಮಾಹಿತಿ ಕೊರತೆಯಾದರೆ, ಜನರ ಮನಸ್ಸಿನಲ್ಲಿ ಸರ್ಕಾರದವರು ಹೇಳತಕ್ಕ ಅಭಿಪ್ರಾಯ ಮಾತ್ರ ಸರಿ, ಅದಕ್ಕೆ ಬೇರೆಯವರು ಏನೂ ಕೂಡ ಹೇಳತಕ್ಕ ಅವಶ್ಯಕತೆ ಇಲ್ಲ ಎನ್ನುವಂತಾಗುತ್ತದೆ. ಯಾರೇ ಮೀಡಿಯಾದವರು ನೇರ ಪ್ರಸಾರ ಮಾಡಲು ಮುಂದೆ ಬಂದರೆ, 'ನೀವು ಇವತ್ತು ನೇರ ಪ್ರಸಾರ ಮಾಡಿದರೆ ಮಾತ್ರ ಸಾಲದು, ನಾಳೆಯೂ ಕೂಡ ನೀವು ಆ ಕೆಲಸ ಮಾಡಬೇಕು, ಇಲ್ಲದಿದ್ದರೆ ಇವತ್ತು ಪ್ರಸಾರ ಮಾಡಲು ನಾವು ಅವಕಾಶ ಕೊಡುವುದಿಲ್ಲ' ಎಂದು ನೀವು ಅವರಿಗೆ ಹೇಳಬೇಕು. ಈಗ ಒಂದು

version ಮಾತ್ರ ಪ್ರಸಾರವಾಗುತ್ತಿದೆ, ಇನ್ನೊಂದು version ಪ್ರಸಾರವಾಗುತ್ತಿಲ್ಲ. ಅದೇನೇ ಇರಲಿ, ಇದು ಬಹಳ ಮಹತ್ವವಾದುದು. ಪ್ರಚಾರ ನೀಡುವ ಮಾಧ್ಯಮದ ಈ ಪ್ರಯತ್ನ ಏನಿದೆ, ಅದೂ ಕೂಡ ಅನೇಕ ಗೊಂದಲಗಳನ್ನು ಸೃಷ್ಟಿ ಮಾಡುತ್ತದೆ ಮತ್ತು ಗೊಂದಲಗಳನ್ನು ನಿವಾರಣೆ ಕೂಡ ಮಾಡುತ್ತದೆ. ಇವೆರಡೂ ಕೂಡ ಅದರಲ್ಲಿದೆ. ಮಹತ್ವವಾದಂತಹ ಈ ವಿಷಯದ ಕಡೆಗೆ ತಾವು ಗಮನ ಹರಿಸಬೇಕು. ಯಾವ ರೀತಿಯಲ್ಲಿ ಇದನ್ನು ಸರಿಪಡಿಸಬಹುದು ಎಂಬ ಕಡೆಗೆ ತಕ್ಷಣ ಗಮನಿಸಬೇಕು. ಅವಕಾಶ ಮಾಡಿಕೊಡುವುದಿದ್ದರೆ ಎಲ್ಲರಿಗೂ ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ಯಾರಿಗೂ ಅವಕಾಶ ಮಾಡಿಕೊಡಬಾರದು. ಎಲ್ಲರಿಗೂ ಸಮಾನವಾಗಿ ಅವಕಾಶ ದೊರೆಯುವಂತೆ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭಮಾಡಿದ್ದಾರೆ. ಈ ಸಂದರ್ಭದಲ್ಲಿ ಬಹಳಷ್ಟು ಶಾಸಕರ ಗೈರು ಹಾಜರಿ ಎದ್ದು ಕಾಣುತ್ತಿದೆ. ಇದು ಒಳ್ಳೆಯದಲ್ಲ. ಆಡಳಿತ ಪಕ್ಷದವರು ಇರಬಹುದು, ವಿರೋಧ ಪಕ್ಷದವರು ಇರಬಹುದು, ಎರಡೂ ಕಡೆಯವರಿಗೆ ನಾನು ಮೊದಲಿನಿಂದಲೂ ಈ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇರಬಹುದು ಅಥವಾ ಮಾನ್ಯ ವಿರೋಧ ಪಕ್ಷದ ನಾಯಕರು ಇರಬಹುದು, ಯಾರೇ ಆಗಲಿ ಚರ್ಚೆಯಲ್ಲಿ ಭಾಗವಹಿಸಿದ್ದಂತಹ ಸಂದರ್ಭದಲ್ಲಿ ಇಡೀ ಸದನ ಇರಬೇಕು. ಆಗ ಅದಕ್ಕೊಂದು ಘನತೆ ಬರುತ್ತದೆ, ಆಗ ಏನಾದರೊಂದು ಒಳ್ಳೆಯದು ಆಗಲಿಕ್ಕೆ ಸಾಧ್ಯವಿದೆ. ನಾನು ಶಾಸಕರಿಗೆ ಪದೇ ಪದೇ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಎಲ್ಲಾ ಶಾಸಕರು ಗೈರು ಹಾಜರಾಗುವ ಪ್ರವೃತ್ತಿಯನ್ನು ತೊಡೆದು ಹಾಕಬೇಕು. ಇವತ್ತು ಶಾಸಕರ ಹಾಜರಾತಿ ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕು. ಎಲ್ಲಾ ಶಾಸಕರು ಸದನಕ್ಕೆ ಹಾಜರಾಗಿ ಸಕ್ರೀಯವಾಗಿ ಸದನದ ಕಲಾಪಗಳಲ್ಲಿ ಭಾಗವಹಿಸಬೇಕೆಂಬ ಮನವಿಯನ್ನು ನಾನು ಮತ್ತೊಮ್ಮೆ ಮಾಡಿಕೊಳ್ಳುತ್ತಿದ್ದೇನೆ. ಇದು ಆಯಾ ಪಕ್ಷದವರಿಗೆ ಬಿಟ್ಟಂತಹ ವಿಚಾರ. ಎಲ್ಲಾ ಪಕ್ಷಗಳ ಸಚೇತಕರು ಮತ್ತು ನಾಯಕರು ಈ ಬಗ್ಗೆ ತಮ್ಮ ತಮ್ಮ ಪಕ್ಷಗಳ ಸದಸ್ಯರಿಗೆ ಸದಸನದ ಕಲಾಪಕ್ಕೆ ಗೈರು ಹಾಜರಾಗದಂತೆ ತಿಳಿಸಿ, ಶಾಸಕರ ಹಾಜರಾತಿ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ. ತಮ್ಮ ಸಲಹೆ ಬಗ್ಗೆ ನಾನು think ಮಾಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೆ, ದಯವಿಟ್ಟು ತಾವು ಮಾತನಾಡುವುದನ್ನು ಮುಂದುವರೆಸಿ, ತಕ್ಷಣವೇ ಅದರ ಬಗ್ಗೆ ಏನೂ ಮಾಡಲಿಕ್ಕಾಗುವುದಿಲ್ಲ. ಇಡೀ proceedings ಪ್ರಸಾರ ಮಾಡಬೇಕೆಂಬ thinking ಇದೆ, ಅದಕ್ಕೆ ಏನು ಮಾಡಬೇಕೆಂಬ ಬಗ್ಗೆ ನೋಡುತ್ತೇನೆ. ನಿಮ್ಮ ಅಭಿಪ್ರಾಯಕ್ಕೆ ನನ್ನ ಒಪ್ಪಿಗೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ನಿನ್ನೆ ಸುಮಾರು ಏಳು ಚಾನೆಲ್‌ಗಳಲ್ಲಿ ರಾಜ್ಯದ ಜನತೆ ಬಜೆಟ್ ಮಂಡನೆ ನೋಡಲು ತಾವು ಅವಕಾಶ ಕಲ್ಪಿಸಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲೂ ನಿನ್ನೆಯಂತೆಯೇ ಪೂರ್ತಿ budget session continue ಮಾಡುವುದು ಸೂಕ್ತವೆಂಬುದು ನನ್ನ ಭಾವನೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಇದರ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ತಾವು ಇವತ್ತೇ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು.

ನಾಳೆ ಇದರ ಬಗ್ಗೆ ಯೋಚನೆ ಮಾಡುತ್ತೇನೆ ಎನ್ನುವುದು ಸೂಕ್ತವಲ್ಲ ಎಂಬುದು ನನ್ನ ಭಾವನೆಯಾಗಿದೆ. ರಾಜ್ಯದ ಜನತೆಗೆ ವಿರೋಧ ಪಕ್ಷದವರು ಏನೂ ಕೆಲಸ ಮಾಡುತ್ತಿಲ್ಲ, ಅವರು ಸುಮ್ಮನೆ ಕುಳಿತಿದ್ದಾರೆ ಎಂಬ ಭಾವನೆ ಬರುತ್ತದೆ. ನಾವು ಕೆಲಸ ಮಾಡುತ್ತಿರುವ ಬಗ್ಗೆ ಕೂಡ ರಾಜ್ಯದ ಜನತೆಗೆ ಬೆಳಕು ಚೆಲ್ಲಬೇಕಾಗುತ್ತದೆ. ದಯವಿಟ್ಟು ಆ ಬಗ್ಗೆ ತಾವು ನಿರ್ಣಯ ಮಾಡಬೇಕಾಗುತ್ತದೆ. ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಮಂಡನೆಯನ್ನು ಏಳು ಚಾನೆಲ್‌ಗಳಲ್ಲಿ ರಾಜ್ಯದ ಜನತೆ ನೋಡಲು ತಾವು ಅವಕಾಶ ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು : ನೇರ ಪ್ರಸಾರಕ್ಕೆ ನಾನು ಅವಕಾಶ ಕೊಟ್ಟಿರುವುದು ಕೇವಲ ನಿನ್ನೆ ಪ್ರಾರಂಭ ಮಾಡಿರುವಂತಾದ್ದಲ್ಲ. ಹಿಂದೆಯೂ ಕೂಡ ಎಲ್ಲಾ ಸ್ಪೀಕರ್‌ಗಳು ಹಿಂದಿನ ಸರ್ಕಾರಗಳಿದ್ದಾಗ ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣವನ್ನು ನೇರ ಪ್ರಸಾರ ಮಾಡಲು ದೃಶ್ಯ ಮಾಧ್ಯಮಗಳಿಗೆ ಅವಕಾಶ ನೀಡಿದ್ದಾರೆ. ನಿನ್ನೆ ಕೂಡ ಅದರಂತೆಯೇ ಅವಕಾಶ ನೀಡಲಾಗಿತ್ತು. ಕೇವಲ ನಿನ್ನೆಯಷ್ಟೇ ಆ ರೀತಿಯ arrangements ಮಾಡಿರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತಾದ್ದೂ ಕೂಡ ಪ್ರಸಾರವಾಗಲು ಏನು ಮಾಡಬೇಕೆಂಬುದರ ಕಡೆಗೆ ಪೂರಕವಾಗಿ ಕೆಲಸ ಮಾಡುತ್ತೇನೆ ಎಂಬುದನ್ನು ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಕ್ಷಣವೇ, ಇವತ್ತೇ ಅದನ್ನು implement ಮಾಡಲಿಕ್ಕೆ ಯಾರಿಗೂ ಕೂಡ ಸಾಧ್ಯವಿಲ್ಲ. ನಿಮ್ಮ ಅಭಿಪ್ರಾಯಕ್ಕೆ ನಾನು ಮನ್ನಣೆ ಕೊಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : ಈ ಬಜೆಟ್ ಅಧಿವೇಶನದಲ್ಲೇ ಅದನ್ನು ಇಂಪ್ಲಿಮೆಂಟ್ ಮಾಡುತ್ತೀರೋ ಅಥವಾ ಮುಂದಿನ ಅಧಿವೇಶನದಲ್ಲಿ ಮಾಡುತ್ತೀರೋ?

ಅಧ್ಯಕ್ಷರು : ಅದರ ಬಗ್ಗೆ ನಾನು think ಮಾಡುತ್ತಿದ್ದೇನೆ. ಆದಷ್ಟು ಬೇಗನೇ implement ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಹೇಳಿದ್ದಕ್ಕೆ ಮನ್ನಣೆ ಕೊಡಲಿಲ್ಲ, ಅವರು ಹೇಳಿದ್ದಕ್ಕೆ ಮನ್ನಣೆ ಕೊಟ್ಟಿರಿ.

ಅಧ್ಯಕ್ಷರು : ನೀವೇ ಮೊದಲು ಸಲಹೆ ಕೊಟ್ಟಿರಿ, ಆದ್ದರಿಂದ ನಿಮ್ಮ ಮಾತಿಗೇ ಮನ್ನಣೆ ಸಿಕ್ಕಿದಂತಾಗಿದೆ.

2. ವಿತ್ತೀಯ ಕಾರ್ಯಕಲಾಪ :

2008-2009ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಶ್ರೀಮಾನ್ ಯಡಿಯೂರಪ್ಪನವರು 2008-2009ನೇ ಸಾಲಿನ ಬಜೆಟ್ ಅನ್ನು ಏನು ಮಂಡಿಸಿದ್ದಾರೆ, ಈ ಬಜೆಟ್‌ನಲ್ಲಿ ಒಂದೆರಡು ಅಂಶಗಳನ್ನು ಬಿಟ್ಟರೆ, ಬಹುಶಃ ಬಾಕಿಯದ್ದೆಲ್ಲಾ repeat ಆಗಿವೆ. ಹಿಂದೆ ಸತತವಾಗಿ ಎರಡು ವರ್ಷಗಳಲ್ಲಿ ಹೇಳಿದಂತಹ ಮಾತುಗಳೇ ಅದರಲ್ಲಿ ಬಂದಿವೆ. ಆದ್ದರಿಂದ, ಈ ಬಜೆಟ್‌ಗೆ ನಾನು